ಕರ್ನಾಟಕ ಅರಣ್ಯ ಇಲಾಖೆ

ಹಳಿಯಾಳ ಅರಣ್ಯ ವಿಭಾಗ


**ಉಪ ಅರಣ್ಯ ಸಂರಕ್ಷಣಾಧಿಕಾರಿರವರ ಕಛೇರಿ, ಹಳಿಯಾಳ ವಿಭಾಗ, ಹಳಿಯಾಳ-581329**

**OFFICE OF THE DEPUTY CONSERVATOR OF FORESTS, HALIYAL DIVISION, HALIYAL-581329**

ದೂರವಾಣಿ: 08284-220128 ಫ್ಯಾಕ್ಸ್: 08284-220365 ಇ-ಮೇಲ್: dcfhalyal@gmail.com


ಕ್ರ ಸಂ: ಡಿ1/ಜಿಎಫ್ಎಲ್/ರೆಲ್ವೆ ಲೈನ್ ಡಬ್ಲಿಂಗ್/ಅ.ಸಂ/ಸಿಆರ್- /2020-21 ದಿನಾಂಕ: 25-09-2020

ಇವರಿಗೆ,
ಮಾನ್ಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು,
ಕೆನರಾ ವೃತ್ತ, ಶಿರಸಿ.

ಮಾನ್ಯರೇ,

ವಿಷಯ: Diversion of 10.45 hectare of forest land in Devalli, Kalambuli and Konshet villages in Castlerock Hobli, Joida Taluk, Uttar Kannada District (Haliyal Forest Division & Kali Tiger Reserve) for Doubling of Tinaighat-Castlerock-Carzon Railway line (South western railways) in favour of Chief engineer (construction), Club road Keshwapur Hubballi, Dharwad District.

ಉಲ್ಲೇಖ:
1) Principal Chief Conservator of Forests(HoFF), Bengalore letter no. A5(2)/GFL/CR-19/2012-13 (E-Office No. KFD/HoFF/A52K(GFL) /01/2018-FC. Dated: 24-12-2019.
2) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಅರಣ್ಯ ಸಂರಕ್ಷಣೆ) ಬೆಂಗಳೂರು ರವರ ಪತ್ರ ಸಂಖ್ಯೆ: A5(2)/GFL/CR-19/2012-13 (E-Office No. KFD/HoFF/A52K(GFL) /01/2018-FC.Dated:30-6-2019.
3) ವಲಯ ಅರಣ್ಯಾಧಿಕಾರಿ ಹಳಿಯಾಳ ರವರ ಕಛೇರಿ ಪತ್ರ ಸಂಖ್ಯೆ: 411/2020-21. ದಿನಾಂಕ: 20-07-2020.
4) ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಹಳಿಯಾಳ ರವರ ಕಛೇರಿ ಪತ್ರ ಸಂಖ್ಯೆ: ಸ.ಅ.ಸಂ/262/2020-21. ದಿನಾಂಕ: 21-07-2020.

≈≈ ❖ ≈≈

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ತಮ್ಮಲ್ಲಿ ವರದಿ ಸಲ್ಲಿಸುವುದೇನೆಂದರೆ, M/s. Chief engineer (construction), Club road Keshwapur Hubballi, Dharwad District ರವರಿಗೆ 10.45 ಹೆ. ಅರಣ್ಯ ಪ್ರದೇಶದಲ್ಲಿ (ಹಳಿಯಾಳ ವಿಭಾಗದ 0.886 ಹೇ.) Tinaighat-Castlerock-Carzon Railway Line Doubling ಕಾಮಗಾರಿ ಕೈಗೊಳ್ಳಲು ಪ್ರಸ್ತಾವನೆಯನ್ನು ತಯಾರಿಸಿ, ತಮ್ಮಲ್ಲಿ ಮಂಜೂರಾತಿಗಾಗಿ ಸಲ್ಲಿಸಲಾಗಿರುತ್ತದೆ. ಸದರಿ ಪ್ರಸ್ತಾವನೆಯಲ್ಲಿ ಈ ವಿಭಾಗದ ಹಳಿಯಾಳ ವಲಯದ ಬೆಳವಟಗಿ ಘಾ.ಸ.ನಂ. 95 ರಲ್ಲಿ ಒಟ್ಟೂ 21.00 ಹೆ. ಅರಣ್ಯ ಪ್ರದೇಶದಲ್ಲಿ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಅರಣ್ಯ ಪ್ರದೇಶವನ್ನು ಗುರುತಿಸಲಾಗಿರುತ್ತದೆ.

ಅದರಂತೆ ಸದರಿ ಪ್ರಸ್ತಾವನೆಯನ್ನು ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಅಪಮು) ಬೆಂಗಳೂರು ರವರು ಉಲ್ಲೇಖ (1) ರಲ್ಲಿ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ರವರಿಗೆ ಸ್ಟೇಜ್-1 ರ ತಾತ್ವಿಕ ಅನುಮೋದನೆಗಾಗಿ ಸಲ್ಲಿಸಿರುತ್ತಾರೆ. ಹಾಗೂ ಉಲ್ಲೇಖ (2) ರಲ್ಲಿ ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಅರಣ್ಯ ಸಂರಕ್ಷಣೆ) ಬೆಂಗಳೂರು ರವರು ಸದರಿ ಪ್ರಸ್ತಾವನೆಗೆ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಒಟ್ಟೂ 21.00 ಹೇ. ಸೂಕ್ತವಾದ ಅರಣ್ಯ ಪ್ರದೇಶವನ್ನು ಗುರುತಿಸಿ ಅದರ ನಕಾಶೆ ಮತ್ತು ಪ್ರಮಾಣ ಪತ್ರವನ್ನು ಸಲ್ಲಿಸಲು ನಿರ್ದೇಶಿಸಿರುತ್ತಾರೆ.

ಸದರಿಯವರ ನಿರ್ದೇಶನದಂತೆ, ಉಲ್ಲೇಖ (3) ರಲ್ಲಿ ವಲಯ ಅರಣ್ಯಾಧಿಕಾರಿ, ಹಳಿಯಾಳ ರವರು ಹಳಿಯಾಳ ವಲಯದ ಬೆಳವಟಗಿ ಘಾ.ಸ.ನಂ. 95 ರಲ್ಲಿ ಒಟ್ಟೂ 21.00 ಹೇ. ಪ್ರದೇಶವು ಕ್ಷೀಣಿತ ಅರಣ್ಯ ಪ್ರದೇಶವಿದ್ದು, ಸದರಿ ಪ್ರದೇಶದಲ್ಲಿ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಜಿ.ಪಿ.ಎಸ್. ನಕಾಶೆ, ಗೂಗಲ್ ಮ್ಯಾಪ್, ಗ್ರಾಮ ನಕಾಶೆ ಹಾಗೂ ಟೋಪೋಶೀಟ್‌ಗಳನ್ನು ಸಲ್ಲಿಸಿರುತ್ತಾರೆ.

ಸದರಿ ವರದಿಯನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಹಳಿಯಾಳ ರವರು ಪರಿಶೀಲಿಸಿ, ಹಳಿಯಾಳ ವಲಯದ ಬೆಳವಟಗಿ ಘಾ.ಸ.ನಂ. 95 ರಲ್ಲಿ ಒಟ್ಟೂ 21.00 ಹೇ. ಪ್ರದೇಶದಲ್ಲಿ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಸೂಕ್ತವಾದ ಪ್ರದೇಶವಾಗಿರುತ್ತದೆ ಎಂದು ಅಭಿಪ್ರಾಯಪಟ್ಟು ವಲಯ ಅರಣ್ಯ ಅಧಿಕಾರಿಗಳ ವರದಿಯನ್ನು ಮುಂದಿನ ಕ್ರಮಕ್ಕಾಗಿ ಉಲ್ಲೇಖ (4) ರಡಿ ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಸದರಿ ವರದಿಗಳನ್ನು ಹಾಗೂ ಕ್ಷೇತ್ರವನ್ನು ಪರಿಶೀಲಿಸಲಾಗಿ, ಹಳಿಯಾಳ ವಲಯದ ಬೆಳವಟಗಿ ಘಾ.ಸ. ನಂ.95 ರಲ್ಲಿ ಒಟ್ಟೂ 21.00 ಹೇ. ಪ್ರದೇಶವು ಕ್ಷೀಣಿತ ಅರಣ್ಯ ಪ್ರದೇಶವಾಗಿದ್ದು, ಸದರಿ ಪ್ರದೇಶದಲ್ಲಿ ಪರಿಹಾರಾತ್ಮಕ ನೆಡುತೋಪು ಬೆಳೆಸುವುದು ಸೂಕ್ತವಾಗಿರುತ್ತದೆ. ಆದಕಾರಣ Tinaighat-Castlerock-Carzon Railway Line Doubling ಕಾಮಗಾರಿ ಪ್ರಸ್ತಾವನೆಗೆ ಹಳಿಯಾಳ ವಲಯದ ಬೆಳವಟಗಿ ಘಾ.ಸ.ನಂ. 95 ರಲ್ಲಿ ಒಟ್ಟೂ 21.00 ಹೇ. ಪ್ರದೇಶದಲ್ಲಿ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಮಂಜೂರಾತಿ ನೀಡಿ ಕಾಂಪಾ ಯೋಜನೆಯಡಿ ಅನುದಾನ ಹಂಚಿಕೆ ಮಾಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಂಡಿರುತ್ತೇನೆ. ಸದರಿ ಪ್ರದೇಶದ ಸೂಕ್ತ ಕ್ಷೇತ್ರದ ವರದಿ, ಜಿ.ಪಿ.ಎಸ್. ನಕಾಶೆ, ಗೂಗಲ್ ಮ್ಯಾಪ್, ಗ್ರಾಮ ನಕಾಶೆ ಹಾಗೂ ಟೋಪೋಶೀಟ್‌ಗಳ 04 ಪ್ರತಿಗಳನ್ನು ಈ ಪತ್ರಕ್ಕೆ ಲಗತ್ತಿಟ್ಟು ತಮ್ಮಲ್ಲಿ ಸಲ್ಲಿಸಿದೆ.

ಗೌರವವಗಳೊಂದಿಗೆ,

ತಮ್ಮ ನಂಬುಗೆಯ,

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಹಳಿಯಾಳ ವಿಭಾಗ, ಹಳಿಯಾಳ.